Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President

Volume 39 | Issue - 6 | 8th August 2024

## “ಸದಸ್ಯತ್ವ ಅಭಿವೃದ್ಧಿ ಪ್ರಾಮುಖ್ಯತೆ”

Guest speaker :

**Rtn. Ashok Kumar Shetty**

Dist. Chairman,

Rotary Membership Development Committee

Time : 7.00 p.m.

Venue : Hotel Shivaprasad Grand, Kundapura



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Anulekha Bayari**
Bulletin Editor

**39th year of Service and Fellowship**

# ವಾರದ ಸಭೆಯ ವರದಿ



ಕಳೆದ ವಾರದ ನಮ್ಮ ಸಾಪ್ತಾಹಿಕ ಸಭೆಯು ಕ್ಲಬ್ ಅಸೆಂಬ್ಲಿಯಾಗಿದ್ದು, ಆಗಮಿಸಿದ ಎಲ್ಲಾ ಸದಸ್ಯರಿಗೆ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಆತ್ಮೀಯವಾಗಿ ಸ್ವಾಗತಿಸಿದರು. ರೊ. ಶ್ರೀನಿವಾಸ ಶೇಟ್‌ರವರ ಪ್ರಾರ್ಥನೆಯ ಮುಖಾಂತರ ಪ್ರಾರಂಭವಾದ ಸಭೆಯಲ್ಲಿ ಕಾರ್ಯದರ್ಶಿ ರೊ. ಭರತ್ ಶೆಟ್ಟಿಯವರು ವಾರದ ವರದಿಯನ್ನು ನೀಡಿದರು. ರೊ. ಸತ್ಯನಾರಾಯಣ ಪುರಾಣಿಕರು ವಾರದ ಚಿಂತನೆಯನ್ನು ನೀಡಿದ ಮೇಲೆ ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ರೋಟರಿ ಮಾಹಿತಿಯಲ್ಲಿ ಈ ವರ್ಷದ Dist. Projectಗಳನ್ನು ವಿಷದವಾಗಿ ಸಭೆಗೆ ನೀಡಿ, ಅದರ ನೈಜ ಅನುಷ್ಠಾನವನ್ನು ನಮ್ಮ ಕಾರ್ಯಕ್ರಮಗಳ ಮೂಲಕ ಸಮಾಜಕ್ಕೆ ನೀಡಬೇಕೆಂದು ಕರೆ ನೀಡಿದರು. ಇಂದಿನ ಈ ಸಭೆಯಲ್ಲಿ ನಮ್ಮ ಕ್ಲಬ್ಬಿಗೆ ಹೊಸದಾಗಿ ಸೇರ್ಪಡೆಗೊಂಡ ರೊ. ವಿವಿರಾಜ್ ಹೆಗ್ಡೆಯವರನ್ನು ರೊ. ವಿವಿಯನ್ ಕ್ರಾಸ್ಟೋರವರು ಸಭೆಗೆ ಪರಿಚಯಿಸಿ, ಪಿಡಿಜಿ ರೊ. ಅಭಿನಂದನ್ ಶೆಟ್ಟಿಯವರು ಕ್ಲಬ್ಬಿಗೆ ಅಧಿಕೃತವಾಗಿ ಸೇರ್ಪಡೆಗೊಳಿಸಿದರು.

ಇಂದಿನ ಸಭೆಯಲ್ಲಿ ಭಂಡಾರ್‌ಕಾರ್ಸ್ ಕಾಲೇಜಿನ ದ್ವಿತೀಯ ಬಿ. ಕಾಂ. ವಿದ್ಯಾರ್ಥಿನಿಯ ವಿದ್ಯಾಭ್ಯಾಸದ ಅನುಕೂಲತೆಗೆ ಆಕೆಯ ವಿನಂತಿಯ ಮೇರೆಗೆ ನಮ್ಮ ಸದಸ್ಯರು ನೀಡಿದ ರೂ. 22,800/–ನ್ನು ರೊ. ವಾಸುದೇವ ಕಾರಂತರು ಹಸ್ತಾಂತರಿಸಿ, ಆಕೆಗೆ ಶುಭ ಹಾರೈಸಿದರು. Dist. CRS Committee ಯ Chairman ಆಗಿರುವ ಸಿದ್ಧಾಪುರ ರೋಟರಿ ಕ್ಲಬ್ಬಿನ ರೊ. ಶ್ರೀಹರಿ ಚಾತ್ರರವರ ವಿನಂತಿಯ ಮೇರೆಗೆ ಹಳ್ಳಿಹೊಳೆಯ ಶೆಟ್ಟಿಪಾಲು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ರೊ. ಸೀತಾರಾಮ ನಕ್ಕತ್ತಾಯರ ಕುಟುಂಬವು ಸ್ಪಂದಿಸಿ, ನೀಡಿದ ರೂ. 5,000/–ದ ಚೆಕ್ಕನ್ನು ರೊ. ಶ್ರೀಹರಿ ಚಾತ್ರರವರಿಗೆ ಅರ್ಪಿಸಿ ಶಾಲೆಗೆ ಹಸ್ತಾಂತರಿಸಲಾಯಿತು. ಅಧ್ಯಕ್ಷರು ತಮ್ಮ ಅನಿಸಿಕೆಯಲ್ಲಿ ಕಳೆದ ತಿಂಗಳಲ್ಲಿ ನಡೆದ ಎಲ್ಲಾ ಕಾರ್ಯಕ್ರಮಗಳಿಗೆ ಸದಸ್ಯರು ನೀಡಿದ ಸಹಕಾರಕ್ಕೆ ಕೃತಜ್ಞತೆಯನ್ನು ನೀಡಿ, ಮುಂದಿನ ತಿಂಗಳಲ್ಲಿ ನಡೆಸಬಹುದಾದ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಸದಸ್ಯರು ನೀಡಿದ ಎಲ್ಲಾ ಸಲಹೆಗಳ ಅನುಷ್ಠಾನಕ್ಕೆ ತಾನು ಶ್ರಮಿಸುವುದಾಗಿ ಹೇಳಿದರು. ಹಾಗೆಯೇ ಕಲ್ಕತ್ತಾದ ಉದ್ಯಮಿ ಶ್ರೀಮತಿ ಸುಪ್ರಿಯಾ ಕಾಮತ್ ಬ್ಯಾನರ್ಜಿಯವರು ಕುಂದಾಪುರದ ಬಿ. ಬಿ. ಹೆಗ್ಡೆ ಕಾಲೇಜಿನ ಆರ್ಥಿಕವಾಗಿ ಹಿಂದುಳಿದಿರುವ ಮೂವರು ವಿದ್ಯಾರ್ಥಿನಿಯರ ವಾರ್ಷಿಕ ಫೀಸ್ ಆಗಿರುವ ರೂ. 60,000/– ನೀಡಿದ್ದಕ್ಕಾಗಿ ಅವರನ್ನು ಹಾಗೂ ಅದಕ್ಕಾಗಿ ಶ್ರಮಿಸಿದ ರೊ. ರಮಾನಂದ ಕಾರಂತರಿಗೆ ಕೃತಜ್ಞತೆಯನ್ನು ತಿಳಿಸಿದರು. ಭಂಡಾರ್‌ಕಾರ್ಸ್ ಕಾಲೇಜಿನ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿನಿ ಕುಮಾರಿ ಸಹನಾಳ ವಿದ್ಯಾಭ್ಯಾಸದ ಅನುಕೂಲತೆಗೆ ಸಹಕರಿಸಿದ ಎಲ್ಲಾ ಸದಸ್ಯರಿಗೂ ಹಾಗೂ ಶೆಟ್ಟಿಪಾಲ್ ಶಾಲೆಗೆ ಸಹಾಯವನ್ನು ನೀಡಿದ ರೊ. ಸೀತಾರಾಮ ನಕ್ಕತ್ತಾಯರ ಕುಟುಂಬಕ್ಕೂ ಧನ್ಯವಾದವನ್ನಿತ್ತರು. ಇಂದಿನ ಸಭೆಯಲ್ಲಿ ರೊ. ಶ್ರೀನಿವಾಸ್ ಶೇಟ್ ಹಾಗೂ ರೊ. ಮನೋಹರ್ ಭಟ್‌ರವರು ತಮ್ಮ ಹುಟ್ಟುಹಬ್ಬದ ಪ್ರಯುಕ್ತ ಜಂಟಿಯಾಗಿ ಕೇಕನ್ನು ಕತ್ತರಿಸಿ, ಎಲ್ಲರಿಗೂ ಸಿಹಿ ಹಂಚಿ ತಮ್ಮ ಸಂಭ್ರಮವನ್ನು ಹಂಚಿಕೊಂಡರು. ರೊ. ಜೆರಾಲ್ಡ್ ಕ್ರಾಸ್ಟೋರವರು ನಗೆಹನಿಯನ್ನು ಸಿಡಿಸಿ ರಂಜಿಸಿದರು. ರೊ. ಭರತ್ ಶೆಟ್ಟಿಯವರು ಲಕ್ಕಿ ರೊಟೇರಿಯನ್ ಆಗಿ ಆಯ್ಕೆಯಾದರು. ರೊ. ಮಹೇಂದ್ರ ಶೆಟ್ಟಿಯವರು ವಂದಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.





## ಭಂಡಾರ್‌ಕಾರ್ಸ್ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಸಹನಾಳ ವಿದ್ಯಾಭ್ಯಾಸಕ್ಕೆ ದೇಣಿಗೆ ನೀಡಿದ ಸದಸ್ಯರು

1. ರೊ. ಜಿ. ಶ್ರೀಧರ್ ಶೆಟ್ಟಿ
2. ರೊ. ವಾಸುದೇವ ಕಾರಂತ್
3. ರೊ. ಮನೋಹರ ಭಟ್
4. ರೊ. ಡಾ. ಉಮೇಶ್ ಪುತ್ರನ್
5. ರೊ. ಮಹೇಂದ್ರ ಶೆಟ್ಟಿ
6. ರೊ. ಔಜಲಿನ್ ರೆಬೆಲ್ಲೋ
7. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ
8. ರೊ. ಜುಡಿತ್ ಮೆಂಡೋನ್ಸಾ
9. ರೊ. ಸಂಕೇತ್ ಹೆಗ್ಡೆ
10. ರೊ. ವಿಜಯ ಶೆಟ್ಟಿ
11. ರೊ. ಭರತ್ ಶೆಟ್ಟಿ

### ಕಳೆದ ವಾರದ ಚಿಂತನೆ

ನಿಸರ್ಗ ಮತ್ತು ಪ್ರಕೃತಿ ನಮಗೆ ಬೇಕಾದುದನ್ನು ಕೊಟ್ಟಿದೆ. ಅದರ ಅಸ್ತಿತ್ವ ನಾವು ಆಸ್ವಾದಿಸಬೇಕೇ ವಿನಹಾಃ ಹಾಳು ಗೆಡವಬಾರದು. ನಮ್ಮ ಸಂತೋಷಕ್ಕಾಗಿ, ಸ್ವಾರ್ಥಕ್ಕಾಗಿ ಪ್ರಕೃತಿಯನ್ನು ನಮ್ಮಿಷ್ಟದಂತೆ ನಿಯಮಕ್ಕೆ ವಿರುದ್ಧವಾಗಿ ಬಳಸಿಕೊಂಡರೆ ವಿನಾಶಕ್ಕೆ ಕಾರಣವಾಗುತ್ತದೆ. ಇದು ನಿಸರ್ಗದ ವಿನಾಶ ಮಾತ್ರವಾಗದೇ ಮನುಕುಲದ ನಾಶವೂ ಸಂಭವಿಸುತ್ತದೆ. ಕೆಲವು ದಿನಗಳಿಂದ ನಡೆದ ಘಟನೆಗಳು ಇದಕ್ಕೆ ಸಾಕ್ಷಿಯಾಗಿದೆ.

**–ರೊ. ಸತ್ಯನಾರಾಯಣ ಪುರಾಣಿಕ**



ಪಿಡಿಜಿ ರೊ. ಅಭಿನಂದನ್ ಶೆಟ್ಟಿಯವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರನ್ನು ಭೇಟಿಯಾಗಿ ಪಂಚಗಂಗಾವಳಿ ನದಿಯಲ್ಲಿ ತುಂಬಿದ ಹೂಳನ್ನು ತೆಗೆಸುವ ಬಗ್ಗೆ ಮನವಿಯನ್ನು ನೀಡಿದಾಗ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಮನವಿಗೆ ಸ್ಪಂದಿಸಿ, ಕುಂದಾಪುರದ ಬ್ಲೂ ವಾಟರ್‌ನಲ್ಲಿ ನೆಲೆಸಿದ ಹಾಗೂ ಅಲ್ಲಿಯ ಆತಿಥ್ಯವನ್ನು ಸವಿದ ನೆನಪನ್ನು ಮೆಲುಕು ಹಾಕಿದರು.






ದಿನಾಂಕ 31-07-2024ರಂದು ಕುಂದಾಪುರ ವಲಯ ಮಟ್ಟದ ಚೆಸ್ ಪಂದ್ಯಾಟವು ಸೈಂಟ್ ಮೇರಿಸ್ ಹಿರಿಯ ಪ್ರಾಥಮಿಕ ಶಾಲೆ ಕುಂದಾಪುರ ಇಲ್ಲಿ ನಡೆಯಿತು. ಈ ಕ್ರೀಡಾ ಸ್ಪರ್ಧೆಗೆ ನಮ್ಮ ಕ್ಲಬ್ಬಿನ ವತಿಯಿಂದ ರೂ. 8,000 ಮೌಲ್ಯದ ಬಹುಮಾನಗಳನ್ನು ನೀಡಿ, ಅಧ್ಯಕ್ಷರು ವಿದ್ಯಾರ್ಥಿಗಳನ್ನು ಉದ್ದೇಶಿಸಿ, "ಇಂದಿನ ಈ ಪಂದ್ಯಾಟದ ಮೂಲಕ ನೀವು ರಾಜ್ಯ ಹಾಗೂ ರಾಷ್ಟ್ರವನ್ನು ಪ್ರತಿನಿಧಿಸುವವರ ಮಟ್ಟಿಗೆ ಬೆಳೆಯಲು ಈ ಪಂದ್ಯಾಟ ನಾಂದಿಯಾಗಲಿ" ಎಂದು ಶುಭಹಾರೈಸಿದರು.



ದಿನಾಂಕ 03-08-2024 ರಂದು ರೊ. ಮನೋಹರ ಭಟ್‌ರವರು ತಮ್ಮ ಹುಟ್ಟುಹಬ್ಬವನ್ನು ಹೋಟೆಲ್ ಶರೋನ್‌ನಲ್ಲಿ ಬೆಳಗ್ಗಿನ ಉಪಾಹಾರವನ್ನು ನೀಡಿ ಆಚರಿಸಿಕೊಂಡರು. ನಮ್ಮ ಹೆಚ್ಚಿನ ಸದಸ್ಯರು ಅದರಲ್ಲಿ ಭಾಗಿಯಾಗಿ ಶುಭಹಾರೈಸಿದರು.

